04/07/23 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

“ಮಧುರ ಮಕ್ಕಳೇ- ಭಕ್ತರಿಗೆ ಭಕ್ತಿಯ ಫಲ ಕೊಡಲು ಮತ್ತು ಆಗಮನ-ನಿರ್ಗಮನದ ವ್ಯತ್ಯಾಸವನ್ನು ತಿಳಿಸಿ ಮುಕ್ತಿ-ಜೀವನ್ಮುಕ್ತಿಯ ಆಸ್ತಿಯನ್ನು ಕೊಡಲು ಭೋಲಾನಾಥ ಬಾಬಾ ಬಂದಿದ್ದಾರೆ “

ಪ್ರಶ್ನೆ: 21 ಜನ್ಮಗಳಿಗೆ ರಾಜ್ಯಭಾಗ್ಯದ ಪದವಿಯು ಯಾವ ಮಕ್ಕಳಿಗೆ ಸಿಗುತ್ತದೆ? ಪ್ರಜೆಗಳಲ್ಲಿ ಯಾರು ಹೋಗುತ್ತಾರೆ?

ಉತ್ತರ: ಯಾರು ಸ್ವಂತಮಕ್ಕಳಾಗಿ ತಂದೆಯ ಮೇಲೆ ಪೂರ್ಣ ಬಲಿಹಾರಿಯಾಗುತ್ತಾರೆಯೋ ಅವರಿಗೆ ರಾಜ್ಯಪದವಿಯು ಪ್ರಾಪ್ತಿಯಾಗುತ್ತದೆ ಹಾಗೆಯೇ ಯಾರು ಮಲತಾಯಿ ಮಕ್ಕಳಾಗಿರುತ್ತಾರೆ ಬಲಿಹಾರಿಯಾಗುವುದಿಲ್ಲ ಅವರು 21 ಜನ್ಮಗಳಲ್ಲಿ ಪ್ರಜೆಗಳೇ ಆಗುತ್ತಾರೆ. ನೀವು ಶ್ರೀಮತದಂತೆ ನಡೆದು ನಿಮ್ಮ ಯೋಗಬಲದಿಂದ ರಾಜ್ಯತಿಲಕವನ್ನು ಪಡೆದುಕೊಳ್ಳುತ್ತೀರಿ. ಇಲ್ಲಿ ಯಾವುದೇ ಆಯುಧಗಳ ಮಾತಿಲ್ಲ. ನೀವು ಬುದ್ಧಿಯ ಯೋಗಬಲದಿಂದ ಮಾಯಾಜೀತ, ಜಗತ್ಜೀತರಾಗಬೇಕು.

ಗೀತೆ: ಭೋಲಾನಾಥನಿಗಿಂತ ಭಿನ್ನ.............

ಓಂ ಶಾಂತಿ. ನೋಡಿ ಏನನ್ನು ಹೇಳುತ್ತಾರೆ? ಭಕ್ತರ ರಕ್ಷಣೆ ಮಾಡುವವರು. ಅವಶ್ಯವಾಗಿ ಭಕ್ತರು ಯಾವುದೋ ಆಪತ್ತಿಗೆ ಸಿಲುಕಿಕೊಂಡಿದ್ದಾರೆ. ಭಕ್ತರ ರಕ್ಷಕ ತಂದೆಯಾಗಿದ್ದಾರೆ. ರಕ್ಷಣೆ ಯಾರಿಗೆ ಮಾಡುತ್ತಾರೆ? ಯಾರು ಆಪತ್ತಿನಲ್ಲಿ ಸಿಲುಕಿಕೊಂಡಿದ್ದಾರೆಯೋ ಆ ಭಕ್ತರ ರಕ್ಷಕ ಶಿವತಂದೆಯಾಗಿದ್ದಾರೆ. ಭಕ್ತರಿಗೆ ಭಕ್ತಿಯ ಫಲ ಅವಶ್ಯವಾಗಿ ಸಿಗುತ್ತದೆ, ಪರಿಶ್ರಮಪಡುತ್ತಾರಲ್ಲವೆ. ಕಾನೂನು ಹೇಳುತ್ತದೆ- ಪುರುಷಾರ್ಥದಿಂದ ಪ್ರಾಲಬ್ಧ ಸಿಗುತ್ತದೆ. ಈಗ ಈ ಪ್ರಪಂಚದಲ್ಲಿ ಪುರುಷಾರ್ಥವನ್ನು ಮಾಡಿಸುವವರು ಆಸುರೀ ಸಂಪ್ರದಾಯದವರಾಗಿದ್ದಾರೆ. ವಾಸ್ತವದಲ್ಲಿ ಪುರುಷಾರ್ಥವನ್ನು ಮಾಡಿಸುವವರು ಒಳ್ಳೆಯವರಾಗಿರಬೇಕು. ಸತ್ಯಪುರುಷಾರ್ಥ ಕೇವಲ ಒಬ್ಬ ಭೋಲಾನಾಥ ತಂದೆಯೇ ಮಾಡಿಸುತ್ತಾರೆ. ಶರೀರದ ಲೌಕಿಕ ತಾಯಿ-ತಂದೆ-ಶಿಕ್ಷಕ ಎಲ್ಲರೂ ಹದ್ದಿನ ಪುರುಷಾರ್ಥವನ್ನು ಮಾಡಿಸುತ್ತಾರೆ. ಬೇಹದ್ದಿನ ಜ್ಞಾನವನ್ನು ಯಾರೂ ಕೊಡಲು ಸಾಧ್ಯವಿಲ್ಲ. ಭಲೆ ಯಾರೇ ವಕೀಲ ಅಥವಾ ನ್ಯಾಯಾಧೀಶನೇ ಇರಬಹುದು ಆದರೆ ಮುಂದಿನ ಜನ್ಮದಲ್ಲಿ ಪುನಃ ಓದಲೇಬೇಕಾಗುತ್ತದೆ. ಖಾಯಂ ಆಗಿ ವಕೀಲರು ಆಗಿರುವುದಿಲ್ಲ. ಗುರುಗಳು ಸ್ವಲ್ಪ ಕಲಿಸುತ್ತಾರೆ, ಶಾಸ್ತ್ರವನ್ನು ತಿಳಿಸುತ್ತಾರೆ ಆದರೆ ಅದು ಅಲ್ಪಕಾಲದ ಸುಖವಾಗಿದೆ. ಪ್ರಾಲಬ್ಧವೇನೂ ಸಿಗುವುದಿಲ್ಲ. ಮುಂದಿನ ಜನ್ಮದಲ್ಲಿ ಪುನಃ ಗುರುಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಈ ಭೋಲಾನಾಥ ಸದ್ಗುರುವಾಗಿದ್ದಾರೆ. ಸದ್ಗುರು ಸದಾ ಸತ್ಯವನ್ನೇ ಹೇಳುತ್ತಾರೆ ಅವರೇ ಬಂದು ಸತ್ಯಕಥೆಯನ್ನು ತಿಳಿಸುತ್ತಾರೆ. ಇದು ಸದ್ಗುರುವಿನ ಮತವಾಗಿದೆ. ಇದರಿಂದ ಮುಕ್ತಿ-ಜೀವನ್ಮುಕ್ತಿ ಸಿಗುತ್ತದೆ. ಇದು ನರನಿಂದ ನಾರಾಯಣರನ್ನಾಗಿ ಮಾಡುವ ಮತವಾಗಿದೆ. ಆಗಮನ-ನಿರ್ಗಮನ, ಆದಿ-ಮಧ್ಯ-ಅಂತ್ಯದ ರಹಸ್ಯವನ್ನು ಭೋಲಾನಾಥ ಕುಳಿತು ತಿಳಿಸುತ್ತಿದ್ದಾರೆ. ಅನ್ಯರು ಯಾರೂ ಸಹ ಮುಕ್ತಿಧಾಮ-ಜೀವನ್ಮುಕ್ತಿಧಾಮವನ್ನು ತಿಳಿದುಕೊಂಡಿಲ್ಲ. ಮುಕ್ತಿಧಾಮದ ಮಾಲೀಕ ಪರಮಪಿತ ಪರಮಾತ್ಮನಾಗಿದ್ದಾರೆ. ಅವರು ಪರಮಧಾಮದಲ್ಲಿರುತ್ತಾರೆ. ಈಗ ಮಕ್ಕಳಿಗೆ ಮತ ಸಿಗುತ್ತದೆ. ತಂದೆಯೂ ಪದೇ-ಪದೇ ತಿಳಿಸಿದ್ದಾರೆ- ಅವರು ತಂದೆ-ಶಿಕ್ಷಕ-ಗುರು ಆಗಿದ್ದಾರೆ. ಒಂದುವೇಳೆ ಕೃಷ್ಣ ಭಗವಂತನಾದರೆ ಅವರು ಕೇವಲ ಮುರುಳಿಯನ್ನು ನುಡಿಸಿದ್ದಾರೆಯೇ? ಶ್ರೀಕೃಷ್ಣನಿಗೆ ತಂದೆ-ಶಿಕ್ಷಕ-ಗುರು ಎಂದು ಯಾರೂ ಹೇಳುವುದಿಲ್ಲ. ಈಗ ತಂದೆಯು ಸತ್ಯಮಾರ್ಗವನ್ನು ತಿಳಿಸುತ್ತಿದ್ದಾರೆ ಅಂದಮೇಲೆ ಅಸತ್ಯವನ್ನು ಬಿಟ್ಟುಬಿಡಬೇಕಾಗಿದೆ. ದ್ವಾಪರದಿಂದ ಗುರುಗಳು ಪ್ರಾರಂಭವಾಗಿದ್ದಾರೆ. ಸತ್ಯಯುಗ-ತ್ರೇತಾಯುಗದಲ್ಲಿ ಗುರುಗಳಿರುವುದಿಲ್ಲ. ಮಾತಾಗುರು ಜ್ಞಾನಾಮೃತವನ್ನು ಕುಡಿಸಿ ಸ್ವರ್ಗ ಮಾಡಿದರು. ಪುನಃ ಅಲ್ಲಿ ಗುರುಗಳ ಅವಶ್ಯಕತೆಯಿರುವುದಿಲ್ಲ. ಈಗ ನೋಡಿ ನೀವು ಮಕ್ಕಳಿಗೆ ಎಷ್ಟು ಒಳ್ಳೆಯ ಮತವನ್ನು ಕೊಡುತ್ತಿದ್ದೇನೆ. ತಂದೆಯುಎಲ್ಲರನ್ನೂ ಯುದ್ಧದ ಮೈದಾನದಲ್ಲಿ ನಿಲ್ಲಿಸಿದ್ದಾರೆ. ಪಂಚವಿಕಾರಗಳ ಮೇಲೆ ವಿಜಯಗಳಿಸಿ ಈ ರೀತಿ ಶ್ರೀಕೃಷ್ಣನ ಸಮಾನ ದೇವತೆಗಳಾಗಬೇಕು. ನಾವು ತಿಳಿದಿದ್ದೇವೆ- ಶ್ರೀಕೃಷ್ಣ ಮಾಯಾಜೀತರಾಗಿ ಜಗತ್ಜೀತ್ ಅರ್ಥಾತ್ ಜಗತ್ತಿಗೆ ರಾಜಕುಮಾರನಾದರು. ನೀವು ಮಕ್ಕಳು ತಿಳಿದಿದ್ದೀರಿ- ನಾವು ಮೈದಾನದಲ್ಲಿದ್ದೇವೆ. ಮಾಯಾಜೀತ ಜಗತ್ಜೀತರಾಗಬೇಕು. ಹೇಗೆ ಕೃಷ್ಣನೇ ನಂತರ ನಾರಾಯಣನಾದರು ಮತ್ತು ಅವರಜೊತೆ ಪೂರ್ಣ ರಾಜಧಾನಿಯಿತ್ತು. ಅಂದಮೇಲೆ ಅವರೆಲ್ಲರೂ ಯುದ್ಧದ ಮೈದಾನದಲ್ಲಿದ್ದರು. ಅವರೇ ಮಾಯೆಯ ಮೇಲೆ ವಿಜಯ ಪಡೆದರು. 5000 ವರ್ಷಗಳ ಹಿಂದೆ ಈ ಶ್ರೀಕೃಷ್ಣನೂ ಸಹ ತನ್ನ ಅಂತಿಮ ಜನ್ಮದಲ್ಲಿ ಯುದ್ಧದ ಮೈದಾನದಲ್ಲಿದ್ದರು ಹಾಗೆ ಈಗಲೂ ಯುದ್ಧದ ಮೈದಾನದಲ್ಲಿದ್ದಾರೆ, ನೀವೂ ಯುದ್ಧದ ಮೈದನಾದಲ್ಲಿದ್ದೀರಿ. ಪಂಚವಿಕಾರಗಳ ಮೇಲೆ ವಿಜಯ ಪಡೆದು ನೀವೂ ಸಹ ಈ ರೀತಿ ಆಗಬೇಕು. ಇದಕ್ಕೆ ನಾರಾಯಣಿ ನಶೆ ಎಂದು ಹೇಳಲಾಗುತ್ತದೆ. ಮಾಯಾಜೀತ, ಜಗತ್ಜೀತರಾಗಬೇಕು. ಎಷ್ಟು ಸಹಜ ಮಾತಾಗಿದೆ. ದ್ರೌಪದಿ ಕೇವಲ ಒಬ್ಬರಷ್ಟೇ ಅಲ್ಲ, ಎಲ್ಲಾ ಮಾತೆಯರೂ ದ್ರೌಪದಿಯರಾಗಿದ್ದಾರೆ. ಎಲ್ಲರನ್ನು ಮಾನಹರಣ ಆಗುವುದರಿಂದ ತಪ್ಪಿಸುತ್ತಾರೆ. ಸತ್ಯಯುಗದಲ್ಲಿ ಯಾರೂ ವಿಕಾರದಲ್ಲಿ ಹೋಗುವುದಿಲ್ಲ. ಅಲ್ಲಿ ಮಕ್ಕಳು ಹೇಗೆ ಜನ್ಮವನ್ನು ತೆಗೆದುಕೊಳ್ಳುತ್ತಾರೆ? ಎಂದು ಕೇಳುತ್ತಾರೆ. ಅದಂತೂ ಪವಿತ್ರ ಪ್ರಪಂಚವಾಗಿದೆ. ಸನ್ಯಾಸಿಗಳು ಮನೆಬಿಟ್ಟು ಹೋಗುತ್ತಾರೆಂದರೆ ಪ್ರಪಂಚವೇ ಸಮಾಪ್ತಿಯಾಗುತ್ತದೆಯೇ? ಪ್ರಪಂಚವಂತೂ

ವೃದ್ಧಿಯಾಗುತ್ತಿರುತ್ತದೆ. ಸನ್ಯಾಸಿಗಳೂ ಸಹ ಪವಿತ್ರತೆಯು ಒಳ್ಳೆಯದೆಂದು ತಿಳಿದಿದ್ದಾರೆ. ವಿಕಾರಗಳ ಸನ್ಯಾಸವಂತೂ ಒಳ್ಳೆಯದು. ಸನ್ಯಾಸ ಮಾಡಿರುವವರಿಗೆ ಸನ್ಯಾಸ ಮಾಡದೇ ಇರುವವರು ನಮಸ್ಕಾರ ಮಾಡಿ ಗುರುಗಳನ್ನಾಗಿ ಮಾಡಿಕೊಳ್ಳುತ್ತಾರೆ. ಈ ಸತ್ಯ ಸದ್ಗುರುವಿನ ಮೂಲಕ ನೀವು ಮಾತೆಯರು ಗುರುಗಳಾಗುತ್ತೀರಿ. ಇವರದೇ ವಿಜಯಮಾಲೆಯೂ ಸಹ ಆಗಿದೆ. ತಂದೆಯು ತಿಳಿಸುತ್ತಾರೆ- ಮಕ್ಕಳೇ, ನೀವು ವಿದ್ಯೆಯನ್ನು ಓದಿ ಪದವಿಯನ್ನು ಪಡೆದುಕೊಳ್ಳಿ. ಈಗ ತಂದೆಯು ಶ್ರೀಕೃಷ್ಣನ ಸಮಾನ ಮಾಡಲು ಯುದ್ಧದ ಮೈದಾನದಲ್ಲಿ ನಿಲ್ಲಿಸಿದ್ದಾರೆ. ಅವರದೇ ಪೂರ್ಣ ರಾಜಧಾನಿಯಾಗಿದೆ. ರಾಜಕುಮಾರರು-ಕುಮಾರಿಯರೂ ಇರುತ್ತಾರೆ. ಈಗಂತೂ ರಾಜ-ಮಹಾರಾಜ ಮತ್ತು ರಾಜಕುಮಾರ-ಕುಮಾರಿಯೆಂದು ಹೇಳಿಕೊಳ್ಳಲು ಸಾಧ್ಯವಿಲ್ಲ. ಈಗ ನಿಮಗೆ ತಂದೆಯಿಂದ ದೈವೀಮತ ಸಿಕ್ಕಿದೆ. ಈಗ ಮಾತೆಯರಿಗೆ ಜ್ಞಾನದ ಕಳಶ ಸಿಕ್ಕಿದೆ. ಈ ಮಕ್ಕಳು ಅಮೃತವನ್ನು ಕುಡಿಸಿ ಅಸುರರನ್ನು ದೇವತೆಗಳನ್ನಾಗಿ ಮಾಡುತ್ತಾರೆ. ದೇವತೆಗಳು ಹಳೆಯ ಪ್ರಪಂಚದಲ್ಲಿ ರಾಜ್ಯ ಮಾಡುವುದಿಲ್ಲ. ಹೊಸ ಪ್ರಪಂಚವೂ ಆಗುತ್ತಿದೆ ಅಂದಾಗ ಮಕ್ಕಳೇ ಬೇಗ-ಬೇಗ ಪುರುಷಾರ್ಥ ಮಾಡಿ. ಒಂದನೇಯದು ವಿಕಾರಗಳ ಬಂಧನ, ಎರಡನೆಯದು ಕರ್ಮಬಂಧನವಾಗಿದೆ. ಅದರಿಂದ ಮುಕ್ತರಾಗಲು ಶ್ರೀಮತದಂತೆ ನಡೆಯಬೇಕಾಗಿದೆ. ತಂದೆಯು ತಿಳಿಸುತ್ತಾರೆ- ನನ್ನನ್ನು ನೆನಪು ಮಾಡಿ, ಅಶರೀರಿಗಳಾಗಿ. ಆತ್ಮ-ಪರಮಾತ್ಮನಲ್ಲಿ ಲೀನವಾಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಯಾವುದೇ ಜ್ಯೋತಿಯು ಸಮಾವೇಶವಾಗುವುದಿಲ್ಲ. ಆತ್ಮವು ಸಮಾವೇಶವಾದರೆ ಜಡವಾಗುತ್ತದೆ. ಆತ್ಮವಂತೂ ಅವಿನಾಶಿಯಾಗಿದೆ. ಶರೀರವು ವಿನಾಶಿಯಾಗಿದೆ. ಆತ್ಮವು ನನ್ನ ಜೊತೆ ಯೋಗವನ್ನಿಟ್ಟು ಪವಿತ್ರವಾಗುತ್ತದೆ ನಂತರ ಶರೀರವು ಪವಿತ್ರವಾಗಿರುವುದೇ ಸಿಗುತ್ತದೆ. ಆತ್ಮವು ಪವಿತ್ರವಾದರೆ ಈ ಶರೀರವು ಸಮಾಪ್ತಿಯಾಗುತ್ತದೆ. ನಂತರ ಪವಿತ್ರ ತತ್ವಗಳಿಂದ ಪವಿತ್ರ ಶರೀರವಾಗುತ್ತದೆ. ಈ ಶರೀರವು ಪೂಜೆಗೆ ಯೋಗ್ಯವಲ್ಲ. ಪೂಜ್ಯರು ಕೇವಲ ದೇವತೆಗಳಾಗಿದ್ದಾರೆ, ಅವರ ಮೇಲೆ ಹೂಗಳನ್ನು ಅರ್ಪಿಸುತ್ತಾರೆ. ಅವರಿಗೆ ಶ್ರೀ ಶ್ರೀ ಅರ್ಥಾತ್ ಸರ್ವಶ್ರೇಷ್ಠವೆಂದು ಹೇಳಲಾಗುತ್ತದೆ. ಸರ್ವಶ್ರೇಷ್ಠ ಎಂದು 2 ಬಾರಿ ಏಕೆ ಹೇಳುತ್ತಾರೆ? ಏಕೆಂದರೆ ಸೂರ್ಯವಂಶಿ ಲಕ್ಷ್ಮೀ-ನಾರಾಯಣರು ಶ್ರೇಷ್ಠಕ್ಕಿಂತ ಶ್ರೇಷ್ಠವಾಗಿದ್ದರೆ ಅವರ ಆತ್ಮ ಮತ್ತು ಶರೀರ ಎರಡೂ ಪವಿತ್ರವಾಗಿದೆ. ಅವರಿಗೆ 16 ಕಲಾ ಸಂಪೂರ್ಣರೆಂದು ಕರೆಯುತ್ತಾರೆ. ಚಂದ್ರವಂಶಿಯಲ್ಲಿ 14 ಕಲೆಯುಳ್ಳ ಕಾರಣ ಕೇವಲ ಶ್ರೀ ಎಂದು ಹೇಳಲಾಗುತ್ತದೆ. ಲಕ್ಷ್ಮೀ-ನಾರಾಯಣರಿಗೆ ಶ್ರೀ ಶ್ರೀ ಲಕ್ಷ್ಮೀ, ಶ್ರೀ ಶ್ರೀ ನಾರಾಯಣ ಎನ್ನುವ ಉನ್ನತ ಬಿರುದು ಸಿಗುತ್ತದೆ. ಅವರು ಮಹಾರಾಜಾ-ಮಹಾರಾಣಿಯಾಗಿದ್ದಾರೆ, ರಾಮ-ಸೀತೆ ರಾಜ-ರಾಣಿಯಾಗಿದ್ದಾರೆ. ನಂಬರ್ವಾರ್ ಯಾರು ಹೇಗೆ ಆಗುತ್ತಾರೆಯೋ ಹಾಗೆಯೇ ಬಿರುದು ಸಿಗುತ್ತದೆ. ಇಲ್ಲಿಯೂ ಮಹಾರಾಜರು ಮತ್ತು ರಾಜರಿದ್ದಾರೆ, ದೊಡ್ಡವರಿಗೆ ಮಹಾರಾಜ ಎಂದು ಹೇಳಲಾಗುತ್ತದೆ. ರಾಜರು, ಮಹಾರಾಜರ ಮುಂದೆ ತಲೆಬಾಗುತ್ತಾರೆ. ಮಹಾರಾಜ ಮುಂದಿರುತ್ತಾರೆ, ರಾಜರು ಹಿಂದಿರುತ್ತಾರೆ. ಈಗ ಶ್ರೀಮತದಂತೆ ನಡೆಯಬೇಕು. ತಂದೆಯು ಶ್ರೀ ಶ್ರೀ ಜಗದ್ಗುರುವಾಗಿದ್ದಾರೆ, ರುದ್ರಮಾಲೆಯೂ ಇದೆಯಲ್ಲವೆ. ಜಗತ್ತಿನ ಮಾಲೀಕನೂ ತಂದೆಯಾಗಿದ್ದಾರೆ, ಶಿಕ್ಷಕನೂ ಆಗಿದ್ದಾರೆ, ಗುರುವೂ ಆಗಿದ್ದಾರೆ. ಇಂತಹ ತಂದೆಯನ್ನು ನೆನಪು ಮಾಡಬೇಕಲ್ಲವೆ. ಬಂಧನದಿಂದ ಬಿಡಿಸಿ ಎಂದು ಹೇಳುತ್ತಾರೆ (ಗಿಳಿಯ ಪಾಠದ ರೀತಿ) ಅರೆ! ಭಗವಂತ ಹೇಳುತ್ತಾರೆ- ನಾನು ನಿಮ್ಮನ್ನು ಕರೆದುಕೊಂಡು ಹೋಗಲು ಬಂದಿದ್ದೇನೆ ಕೇವಲ ನನ್ನ ಕೈಯನ್ನು ಹಿಡಿದುಕೊಳ್ಳಿ. ತಂದೆಯು ಏನನ್ನು ಹೇಳುತ್ತಾರೆಯೋ ಅದನ್ನು ಮಾಡಿರಿ. ಪವಿತ್ರರೂ ಅವಶ್ಯವಾಗಿ ಆಗಬೇಕು. ಈ ಸ್ಮಶಾನವನ್ನು ಏತಕ್ಕೆ ನೆನಪು ಮಾಡಬೇಕು? ಇಲ್ಲಿಯೇ ಇರಬೇಕು ಆದರೆ ಬುದ್ಧಿಯೋಗವನ್ನು ಅಲ್ಲಿ ಜೋಡಿಸಬೇಕು. ಇದಕ್ಕೆ ಶಾಂತಿಧಾಮ, ಸುಖಧಾಮವನ್ನು ನೆನಪು ಮಾಡುವುದು ಎಂದು ಹೇಳಲಾಗುತ್ತದೆ. ನಷ್ಟಾಮೋಹರೂ ಆಗಬೇಕು. ತಂದೆಯು ಪತಿಯರ ಪತಿ, ತಂದೆಯರಿಗೆ ತಂದೆ, ಗುರುಗಳಿಗೆ ಗುರುವಾಗಿದ್ದಾರೆ. ಈ ರೀತಿ ಶ್ರೀಕೃಷ್ಣನ ಸಮಾನರಾಗಲು ಪರಿಶ್ರಮಪಡಬೇಕು. ಕಲ್ಪದ ಹಿಂದೆಯೂ ಸಹ ಪುರುಷಾರ್ಥ ಮಾಡಿದ್ದಿರಿ ಮತ್ತು ಸತ್ಯಯುಗದ ರಾಜಧಾನಿ ಸ್ಥಾಪನೆಯಾಗಿತ್ತು. ಇದರಲ್ಲಿ ಪವಿತ್ರರಾಗಿರಬೇಕು. ಪತಿ ಹೇಳಿದ ಸೇವೆಯನ್ನು ಮಾಡಿರಿ ಆದರೆ ಕೇವಲ ಪವಿತ್ರರಾಗಿರಿ. ಪವಿತ್ರರಾಗಿರದಿದ್ದರೆ ವೈಕುಂಠದ ಮಾಲೀಕರಾಗಲು ಸಾಧ್ಯವಿಲ್ಲ. ಈಗ ತಂದೆಯು ಬಂದು ನಾವು ಮಕ್ಕಳನ್ನು ಸ್ವರ್ಗವಾಸಿಗಳನ್ನಾಗಿ ಮಾಡುತ್ತಾರೆ. ಪತಿತರನ್ನು ಪಾವನ ಮಾಡುವವರು ಹಾಗೂ ಜಗತ್ತಿನ ಮಾಲೀಕರು ತಂದೆಯಾಗಿದ್ದಾರೆ.

ಈಗ ನೀವು ಮಕ್ಕಳು ಜ್ಞಾನಧನದಿಂದ ಮನುಷ್ಯರನ್ನು ದೇವತೆಗಳನ್ನಾಗಿ ಮಾಡಿರಿ. ಇದು ಜ್ಞಾನವಾಗಿದೆ, ಬುದ್ಧಿಯಲ್ಲಿ ಎಷ್ಟು ಬೆಳಕು ಬಂದಿದೆ, ಬೇರೆ ಯಾರಿಗೂ ಈ ಜ್ಞಾನವಿಲ್ಲ. ಎಲ್ಲರೂ ಎಲ್ಲಾಕಡೆಯಿಂದ ಪೆಟ್ಟು ತಿನ್ನುತ್ತಿರುತ್ತಾರೆ. ತಂದೆಯು ನಮ್ಮನ್ನು ಎಷ್ಟು ಶಾಂತಿಯಲ್ಲಿ ಕೂರಿಸಿದ್ದಾರೆ. ತಂದೆಯು ತಿಳಿಸುತ್ತಾರೆ- ಸಾಯುವಂತಹ ಸ್ಥಿತಿಯಲ್ಲಿದ್ದರೂ ಸಹ ಕುಳಿತು ಮುರುಳಿಯನ್ನು ಕೇಳಿ, ಜ್ಞಾನಾಮೃತ ಬಾಯಲ್ಲಿರಲಿ ಶಿವತಂದೆಯ ನೆನಪಿರಲಿ ಆಗ ಪ್ರಾಣ ತನುವಿನಿಂದ ಹೊರಗಡೆ ಹೋಗಲಿ ನಂತರ ಅಂತ್ಯಮತಿ ಸೋ ಗತಿಯಾಗುತ್ತದೆ. ಇಲ್ಲವೆಂದರೆ ವಿಕರ್ಮ ವಿನಾಶವಾಗುವುದಿಲ್ಲ. ಮೋಹಜೀತರೂ ಆಗುವುದಿಲ್ಲ ಹಾಗೆಯೇ ಫಲವನ್ನು ಕಳೆದುಕೊಳ್ಳುತ್ತೀರಿ. ಎಲ್ಲಾ ಭಕ್ತರು ಮಾಯೆಯ ಬಂಧನದಲ್ಲಿ ಸಿಲುಕಿದ್ದಾರೆ. ರಕ್ಷಕ ಭೋಲಾನಾಥ ಶಿವನಾಗಿದ್ದಾರೆ. ರಕ್ಷಣೆ ಮಾಡಲು ಬಂದಿದ್ದಾರೆ ಅಂದಮೇಲೆ ಅವರ ಸಲಹೆಯಂತೆ ನಡೆಯಬೇಕು. ಶ್ರೀಕೃಷ್ಣನ ಕುಲದಲ್ಲಿ ಹೋಗಬೇಕು. ಶ್ರೀಕೃಷ್ಣ ಪೂರ್ಣ ಉತ್ತೀರ್ಣ, ಪೂರ್ಣಚಂದ್ರನಾಗಿದ್ದಾನೆ. ಯಾವಾಗ ಚಂದ್ರವಂಶಿಗಳ ಸಮಯ ಬರುತ್ತದೆಯೋ ಆಗ ಅವರು ತಮ್ಮ ರಾಜ್ಯವನ್ನು ತೆಗೆದುಕೊಳ್ಳುತ್ತಾರೆ. ಏಕೆ ಅನುತ್ತೀರ್ಣ ಆಗಬೇಕು? ಪೂರ್ಣ ಉತ್ತೀರ್ಣರಾಗುವ ಪುರುಷಾರ್ಥ ಮಾಡಬೇಕು. ಭಯಪಡುವ ಅವಶ್ಯಕತೆಯಿಲ್ಲ. ನಿರ್ಭಯ, ನಿರ್ವೈರಿ ಆಗಬೇಕು. ಭಗವಂತ ಒಬ್ಬ ಭೋಲಾನಾಥನಾಗಿದ್ದಾನೆ. ಎಲ್ಲಾ ಭಕ್ತರ ರಕ್ಷಕನಾಗಿದ್ದಾನೆ. ಪೂಜ್ಯನಾಗಿರುವಂತಹ ಕೃಷ್ಣ ಈಗ ಪೂಜಾರಿಯಾಗಿದ್ದಾನೆ. ಕೃಷ್ಣನ ಆತ್ಮವು ಇಲ್ಲಿಯೇ ಇದೆ. ಈಗ ಸ್ವಲ್ಪ ತಿಳಿದುಕೊಳ್ಳಿ- ಬಹಳ

ದೊಡ್ಡ ಲಾಟರಿಯಾಗಿದೆ. ಕುದುರೆಯ ಸ್ಪರ್ಧೆಯಾಗಿದೆ. ನಾವು ಬುದ್ಧಿಯೋಗದಿಂದ ಓಡಬೇಕು. ಎಷ್ಟು ಓಡುತ್ತೇವೆಯೋ ಅಷ್ಟು ಬೇಗ ತಂದೆಯ ಬಳಿ ತಲುಪುತ್ತೇವೆ, ವಿಕರ್ಮ ವಿನಾಶವಾಗುತ್ತದೆ. ನೀವು ಯುದ್ಧದ ಮೈದಾನದಲ್ಲಿ ನಿಂತಿದ್ದೀರಿ ಎಂದು ತಂದೆಯು ಪದೇ-ಪದೇ ತಿಳಿಸುತ್ತಾರೆ. ಪೂರ್ಣಸೃಷ್ಟಿಯ ಮೇಲೆ ಆಯುಧಗಳು ಎಲ್ಲಿದೆಯೆಂದು ಮನುಷ್ಯರು ಕೇಳುತ್ತಾರೆ. ನಾವು ಬುದ್ಧಿಯೋಗಬಲದಿಂದ ಮಾಯಾಜೀತ, ಜಗತ್ಜೀತರಾಗಬೇಕು. ನಾವು ಶಾಂತಿಯಲ್ಲಿ ಶಿವತಂದೆಯ ನೆನಪಿನಲ್ಲಿ ಕುಳಿತಿದ್ದೇವೆ. ಬುದ್ಧಿಯು ಅಲ್ಲಿ ಸಿಲುಕಿಕೊಂಡಿದೆ. ಪತಿಯರ ಪತಿ ಹೇಳುತ್ತಾರೆ- ಪತಿವ್ರತೆಯಾಗಿರಿ. ಬೇರೆಯಾರನ್ನೂ ನೆನಪು ಮಾಡಬಾರದು. ಯೋಗ ಮಾಡುತ್ತಾ-ಮಾಡುತ್ತಾ ಪರಿಪಕ್ವ ಸ್ಥಿತಿಯನ್ನು ಪಡೆಯಬೇಕು. ಕನ್ಯೆಯು ಪತಿಯನ್ನು ನೆನಪು ಮಾಡುತ್ತಾಳಲ್ಲವೆ. ಅವರಂತೂ ದೇಹಧಾರಿಯಾಗಿದ್ದಾರೆ. ಪರಮಾತ್ಮನು ಅಶರೀರಿಯಾಗಿದ್ದಾರೆ ಅವರನ್ನು ಬುದ್ಧಿಯಿಂದಲೆ ನೆನಪು ಮಾಡಲು ಸಾಧ್ಯ. ದೇಹದ ಅಭಿಮಾನ ಬಿಟ್ಟು ಆತ್ಮಾಭಿಮಾನಿಯಾಗಬೇಕು. ಬುದ್ಧಿಯಲ್ಲಿ ಚಕ್ರವನ್ನು ತಿರುಗಿಸಬೇಕು. ನಾವು ನಮ್ಮ ಸ್ವರ್ಗಧಾಮಕ್ಕೆ ಹೋಗುತ್ತೇವೆ. ಅಲ್ಲಿಂದ ಸೂರ್ಯವಂಶಿ, ಚಂದ್ರವಂಶಿ ಮತ್ತು ವೈಶ್ಯವಂಶಿ, ಶೂದ್ರವಂಶಿಯಲ್ಲಿ ಬರುತ್ತೇವೆ. ನಂತರ ತಂದೆಯು ಬಂದು ಶೂದ್ರರಿಂದ ಬ್ರಾಹ್ಮಣರನ್ನಾಗಿ ಮಾಡುತ್ತಾರೆಂದು ತಮ್ಮ ಆಂತರ್ಯದಲ್ಲಿ ಮಾತನಾಡಿಕೊಳ್ಳಬೇಕು. ಮಕ್ಕಳು ಉದ್ಯಾನವನದಲ್ಲಿ ಹೋಗಿ ಕುಳಿತು ಓದಿಕೊಳ್ಳುತ್ತಾರೆ. ನೀವು ಏಕಾಂತದಲ್ಲಿ ಕುಳಿತು ಶಿವತಂದೆಯನ್ನು ನೆನಪು ಮಾಡಿ ನಂತರ ಹಳೆಯ ಲೆಕ್ಕಾಚಾರ ಮುಗಿಯುತ್ತದೆ ಪುನಃ ನಾವು ರಾಜ್ಯವನ್ನು ಮಾಡುತ್ತೇವೆ. ಈಗ ನಾವು ಯುದ್ಧದ ಮೈದಾನದಲ್ಲಿದ್ದೇವೆ. ನಾವು ಭಾರತದಲ್ಲಿ ಅಟಲ, ಅಖಂಡ, ಸುಖ-ಶಾಂತಿಯ ರಾಜ್ಯವನ್ನು ಮಾಡುತ್ತೇವೆ. ವಿ ಆರ್ ಅಟ್ ವಾರ್...... ನಾವು ಯುದ್ಧದ ಮೈದಾನದಲ್ಲಿದ್ದೇವೆ. ಇದು ಸಂಪೂರ್ಣ ಯೋಗಬಲದ ಮಾತಾಗಿದೆ. ಇದರಲ್ಲಿ ಯಾವುದೆ ಪರಿಶ್ರಮದ ಮಾತಿಲ್ಲ. ಕೇವಲ ತಂದೆಯ ಶ್ರೀಮತದಂತೆ ನಡೆಯಬೇಕು. ನಂತರ ಸ್ವತಃವಾಗಿ ರಾಜ್ಯದ ತಿಲಕ ಸಿಗುತ್ತದೆ. ವರದಾನ ಸಿಗುತ್ತದೆ- ಆಯುಷ್ಯವಾನ್ ಭವ, ಪುತ್ರವಾನ್ ಭವ. ಅಲ್ಲಿ ಸಂಪತ್ತು ಅಪಾರವಾಗಿರುತ್ತದೆ. ಮಗುವಿನ ಜನ್ಮವಾಗುತ್ತದೆಯೆಂದು ಮೊದಲೇ ಸಾಕ್ಷಾತ್ಕಾರವಾಗುತ್ತದೆ. ಅಲ್ಲಿ ಮುಖದ ಪ್ರೀತಿಯಿರುತ್ತದೆ, ವಿಕಾರದ ಮಾತಿರುವುದಿಲ್ಲ. ಅದು ನಿರ್ವಿಕಾರಿ ಪ್ರಪಂಚವಾಗಿದೆ. ಶ್ರೀಕೃಷ್ಣ ಎಷ್ಟು ಫಸ್ಟ್ಕ್ಲಾಸ್ ಮಧುರವಾಗಿದ್ದಾರೆ ಈಗ ಮತ್ತೆ ಈ ರೀತಿಯಾಗಬೇಕು. ಮೀರಾಳಂತೂ ದಾಸಿಯಾಗಿದ್ದಳು, ನೀವು ಪಟ್ಟದ ರಾಣಿಯರಾಗಬೇಕು. ಮೀರಾಳಿಗೆ ಭಗವಂತನೇನು ಸಿಗಲಿಲ್ಲ. ಅದಂತೂ ಭಕ್ತಿಮಾರ್ಗವಾಗಿದೆ. ಮೀರಾಳೂ ಸಹ ಒಂದಲ್ಲ ಒಂದುಕಡೆ ಇದ್ದಾಳೆ, ಅವರೂ ಜ್ಞಾನ ತೆಗೆದುಕೊಂಡಿರಬಹುದು. ಒಂದುವೇಳೆ ಪಕ್ಕಾ ಭಕ್ತಿನಿಯಾಗಿದ್ದರೆ ಮಾತ್ರ. ನಾವೂ ದ್ವಾಪರದಿಂದ ಭಕ್ತಿ ಮಾಡುತ್ತಾ ಬಂದಿದ್ದೇವೆ. ಶಿವತಂದೆ ನಾನು ನಿನ್ನ ಮಗುವಾಗಿದ್ದೇನೆಂದು ಬುದ್ಧಿಯಿಂದ ತಿಳಿದುಕೊಳ್ಳಬೇಕು. ನಿಮ್ಮಿಂದಲೇ ಪೂರ್ಣ ಆಸ್ತಿಯನ್ನು ತೆಗೆದುಕೊಳ್ಳುತ್ತೇನೆ. ನಿಮ್ಮ ಮೇಲೆ ಪೂರ್ಣ ಬಲಿಹಾರಿಯಾಗುತ್ತೇನೆ ಎಂದರೆ ಆಗ ತಂದೆಯು 21 ಬಾರಿ ಬಲಿಹಾರಿಯಾಗುತ್ತಾರೆ. ಒಂದುವೇಳೆ ಬಲಿಹಾರಿಯಾಗುವುದಿಲ್ಲ, ಮಲತಾಯಿ ಮಕ್ಕಳಾಗುತ್ತೀರೆಂದರೆ 21 ಬಾರಿ ಪ್ರಜೆಗಳಾಗುತ್ತೀರಿ. ತಂದೆಯು ಹೇಳುತ್ತಾರೆ- ನೀವು ನನ್ನನ್ನು ನೆನಪು ಮಾಡಿ ಆಗ ನಾನು ಸಹಾಯವನ್ನೂ ಮಾಡುತ್ತೇನೆ. ಸಹಾಯವನ್ನು ಅವಶ್ಯವಾಗಿ ನನ್ನ ಮಕ್ಕಳಿಗೇ ಮಾಡುತ್ತೇನೆ, ಅನ್ಯರಿಗೇಕೆ ಮಾಡಲಿ? ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಮಾಯೆಯ ಮೇಲೆ ವಿಜಯಪಡೆದು ನಾವು ಶ್ರೀಕೃಷ್ಣನ ಸಮಾನ ಮಾಯಾಜೀತರಾಗಬೇಕು. ಈ ಯುದ್ಧದ ಮೈದಾನದಲ್ಲಿ ಸದಾ ವಿಜಯಿಯಾಗಬೇಕು ಎಂದೂ ಸೋಲಬಾರದು.

2. ಶ್ರೀಮತದಿಂದ ಸ್ವಯಂನ್ನು ವಿಕಾರಗಳ ಬಂಧನ ಮತ್ತು ಕರ್ಮಬಂಧನದಿಂದ ಮುಕ್ತ ಮಾಡಿಕೊಳ್ಳಬೇಕಾಗಿದೆ.

ವರದಾನ: ಮುಖಗಳ ಮೂಲಕ ಸಂಪನ್ನ ಸ್ಥಿತಿಯ ಹೊಳಪು ಮತ್ತು ಕಾಂತಿಯನ್ನು ತೋರಿಸುವಂತಹ ಸರ್ವ ಪ್ರಾಪ್ತಿ ಸ್ವರೂಪ ಭವ

ಸಂಗಮಯುಗದ ಬ್ರಾಹ್ಮಣ ಜೀವನದ ವಿಶೇಷತೆಯಾಗಿದೆ-ಸದಾ ಸುಖ-ಶಾಂತಿಯ, ಖುಷಿಯ, ಜ್ಞಾನದ, ಆನಂದದ ಉಯ್ಯಾಲೆಯಲ್ಲಿ ತೂಗಾಡುವುದು. ಸರ್ವ ಪ್ರಾಪ್ತಿಗಳಿಂದ ಸಂಪನ್ನ ಸ್ವರೂಪದ ಅವಿನಾಶಿ ನಶೆಯಲ್ಲಿ ಸ್ಥಿತರಾಗಿರುವುದು. ಮುಖದ ಮೇಲೆ ಪ್ರಾಪ್ತಿಯೇ ಪ್ರಾಪ್ತಿ. ಆ ಸಂಪನ್ನ ಸ್ಥಿತಿಯ ಹೊಳಪು ಮತ್ತು ಕಾಂತಿ ಕಂಡುಬರಲಿ. ಹೇಗೆ ಸ್ಥೂಲ ಧನದಿಂದ ಸಂಪನ್ನ ರಾಜರ ಮುಖದ ಮೇಲೆಯೂ ಸಹ ಹೊಳಪು ಇತ್ತು, ಇಲ್ಲಂತೂ ಅವಿನಾಶಿ ಪ್ರಾಪ್ತಿಯಿದೆ, ಆದ್ದರಿಂದ ಪ್ರಾಪ್ತಿಗಳ ಆತ್ಮೀಯ ಹೊಳಪು ಮತ್ತು ಕಾಂತಿ ಮುಖದಲ್ಲಿ ಕಂಡುಬರಲಿ.

ಸ್ಲೋಗನ್: ಅದೃಷ್ಟಶಾಲಿಗಳು ಯಾರೆಂದರೆ ಯಾರು ಸದಾ ಖುಷಿಯಾಗಿರುತ್ತಾ ಖುಷಿಯ ಖಜಾನೆ ಹಂಚುತ್ತಾ ಇರಿ.